**When it gets down to having to use violence, then you are playing the system's game. The establishment will irritate you to make you fight. Because once they've got you violent then they know how to handle you. Only thing they don't know how to handle is nonviolence and humor.**

**—John Lennon**

ಕ್ರಿ.ಶ.1963ರಲ್ಲಿ ಇಪ್ಪತ್ತರ ಹರೆಯದ ನಾಲ್ಕು ಹುಡುಗರು ತಮ್ಮ ಪ್ರದರ್ಶನಗಳ ಪಯಣಕ್ಕೆಂದು ವಿಮಾನ ನಿಲ್ದಾಣಕ್ಕೆ ಬಂದಾಗ ಮೂರು ಸಾವಿರ ಜನರು ಅವರ ದೂರದೊಂದು ಸಣ್ಣ ನೋಟಕ್ಕಾಗಿ ಕಾಯುತ್ತಿದ್ದರು. ಹಿಸ್ಟೀರಿಯಾಕ್ಕೆ ಒಳಗಾದಂತೆ ಹದಿಹರೆಯದ ಹೆಣ್ಣುಮಕ್ಕಳು ಕೂಗುತ್ತಿದ್ದರು. ಇಷ್ಟನ್ನೇ ಹೇಳಿದರೆ 'ಬೀಟಲ್‌ಮೇನಿಯಾ'ದ ಕುರಿತು ಏನೇನೂ ಹೇಳಿದಂತಾಗದು.

ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ನಾಲ್ಕು ಲಕ್ಷ ಜನ ಏರ್‌ಪೋರ್ಟ್‌ನಿಂದ ಆ ಪಟ್ಟಣದವರೆಗೆ ದಾರಿಯ ಇಕ್ಕೆಲಗಳಲ್ಲಿ ನೆರೆದು ಅವರ ಸಣ್ಣದೊಂದು ನೋಟಕ್ಕಾಗಿ ಕಾಯುತ್ತಿದ್ದರು ಎಂದರೂ ಅವರ ಜನಪ್ರಿಯತೆ ಯಾವ ಮಟ್ಟಕ್ಕಿತ್ತೆಂದು ವಿವರಿಸಿದಂತಾಗದು.

ಅಥವಾ ಪ್ರಪಂಚದ ಅತಿ ಹೆಚ್ಚು ಮಾರಾಟವಾದ ಹಾಡುಗಳ ಸಂಗೀತ ತಂಡ ಎಂದರೂ ಸಂಖ್ಯೆಯ ಹೊರತಾಗಿ ಜಾಗತಿಕ ಸಂಗೀತ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಅವರು ಮಾಡಿದ ಕ್ರಾಂತಿಯ ಬಗ್ಗೆ ಏನೇನೂ ಹೇಳಿದಂತಾಗದು.



* * *

ಎರಡನೇ ಮಹಾಯುದ್ಧ ಆರಂಭವಾದ ಒಂದೇ ವರ್ಷಕ್ಕೆ, ಅಂದರೆ 1940ರಲ್ಲಿ ಇಂಗ್ಲೆಂಡಿನ ಲಿವರ್ ಪೂಲ್‌ನಲ್ಲಿ ಜನಿಸಿದವನು ಜಾನ್ ಲೆನಾನ್. ಆಗಿನ ಯುದ್ಧದ ಕರಿನೆರಳು ಆತನ ಸಂಸಾರದ ಮೇಲೂ ಬಿದ್ದಿತ್ತು. ಆತನ ತಂದೆ ಅವನು ಜನಿಸುವಾಗ ಹತ್ತಿರದಲ್ಲಿರಲಿಲ್ಲ. ದೂರದಲ್ಲೆಲ್ಲೊ ಮಹಾಯುದ್ಧದಲ್ಲಿದ್ದು ಕಾಲಕಾಲಕ್ಕೆ ಚೆಕ್ ಮೂಲಕ ಹಣ ಕಳಿಸುತ್ತಾ ಕುಟುಂಬವನ್ನು ನೋಡಿಕೊಳ್ಳುತ್ತಿದ್ದ.

ಇದ್ದಕ್ಕಿದ್ದಂತೆ ಚೆಕ್ ಕಳಿಸುವುದನ್ನು ನಿಲ್ಲಿಸಿದ ಆತ, ಆರು ತಿಂಗಳ ನಂತರ ವಾಪಾಸ್ ಬಂದ. ಯುದ್ಧದ ಕಡುಕಷ್ಟದ ಸಮಯ. ಎಲ್ಲಿ ಯಾವಾಗ ಏನಾಗುವುದೆಂದು ಊಹಿಸುವುದೂ ಕಷ್ಟ. ಅವನು ವಾಪಾಸ್ ಬರುವಾಗ ಅವನ ಹೆಂಡತಿ, ಜಾನ್‌ನ ತಾಯಿ, ಇನ್ನೊಬ್ಬ ಗಂಡಸಿನ ಜೊತೆಗಿದ್ದು ಇನ್ನೊಂದು ಮಗುವನ್ನು ಹೊಟ್ಟೆಯಳಗಿಟ್ಟುಕೊಂಡಿದ್ದಳು. ಅವನು ಅವಳೊಡನಿರಲಾಗದೆ ದೂರ ಹೋದ. ಮುಂದೆ ಜಾನ್‌ನ ಸುಪರ್ದಿಗೋಸ್ಕರ ಈರ್ವರ ನಡುವೆ ದೊಡ್ಡ ಜಗಳ ನಡೆಯಿತು. ಕೊನೆಗೆ ಐದು ವರ್ಷದ ಜಾನ್ ಅಮ್ಮನ ಬಳಿ ಬಂದ. ಅವನ ತಾಯಿ ಮಗನನ್ನು ತನ್ನ ದೊಡ್ಡಕ್ಕನ ಮನೆಯಲ್ಲಿಟ್ಟು ಸಾಕಿದಳು.

ಹೀಗೆ ಚಿಕ್ಕಂದಿನಿಂದಲೇ ಅಗ್ನಿದಿವ್ಯ ಹಾಯುತ್ತ ಬೆಳೆದ ಜಾನ್ ಬಾಲ್ಯದಿಂದಲೇ ದೊಡ್ಡ ರೆಬೆಲಿಯನ್. ಎಲ್ಲ ಸಿದ್ಧ ಮಾದರಿಗಳನ್ನು, ನಿಯಮಗಳನ್ನು ಪ್ರಶ್ನಿಸುತ್ತಿದ್ದ. 'ತಂದೆ ತಾಯಿ ದೇವರಲ್ಲ, ತಾನು ಅವರೊಂದಿಗಿಲ್ಲ. ಆದ್ದರಿಂದಲೇ ಅದರ ಬಗ್ಗೆ ಗೊತ್ತು' ಎನ್ನುತ್ತಿದ್ದ ಅವನ ಜೊತೆ ಒಡನಾಡಲು ತಮ್ಮ ಮಕ್ಕಳನ್ನು ಕಳಿಸಲು ಆತನ ಓರಗೆಯ ಹುಡುಗರ ತಂದೆತಾಯಿಗಳು ಹೆದರುತ್ತಿದ್ದರು. ಅವನ ಒರಟು ವರ್ತನೆಗಳು ಅವರಲ್ಲಿ ಸಿಡಿಮಿಡಿಯನ್ನುಂಟು ಮಾಡುತ್ತಿದ್ದವು.

ಅದೇ ಊರಿನಲ್ಲಿ ಅವನಿಗಿಂತ ಎರಡು ವರ್ಷ ಕಿರಿಯವನಾಗಿ, 1942ರಲ್ಲಿ ಜನಿಸಿದವನು ಪೌಲ್ ಮೆಕ್ ಕರ್ಟ್ನಿ. ಅವನ ತಂದೆಯೂ ಮಹಾಯುದ್ಧದಲ್ಲಿದ್ದ ಮತ್ತು ಮಗನ ಜನನ ಕಾಲದಲ್ಲಿ ಹೆಂಡತಿಯೊಟ್ಟಿಗಿರಲಿಲ್ಲ. ಕರ್ಟ್ನಿಯ ಬಾಲ್ಯವೂ ಸುಖಮಯವಾದದ್ದೇನೂ ಆಗಿರಲಿಲ್ಲ. ಮಹಾಯುದ್ಧದ ಭೀಕರ ದಿನಗಳವು. ಜೊತೆಗೆ 1956ರಲ್ಲಿ ಅವನಿಗೆ ಕೇವಲ ಹದಿನಾಲ್ಕು ವರ್ಷಗಳಾಗಿದ್ದಾಗ ಅವನ ತಾಯಿ ಚಿಕಿತ್ಸೆಯೊಂದರ ಸಮಯದಲ್ಲಿ ತೀರಿಕೊಂಡಳು. ಕುಟುಂಬವನ್ನು ನೋಡಿಕೊಳ್ಳುತ್ತಿದ್ದ, ದಿಟ್ಟವಾಗಿ ಗಟ್ಟಿಯಾಗಿದ್ದ, ಮುಂಜಾನೆ ಮೂರಕ್ಕೇ ಎದ್ದು ಇಂಗ್ಲೆಂಡಿನ ದಟ್ಟ ಮಂಜು ತುಂಬಿದ ಬೀದಿಗಳಲ್ಲಿ ಸೈಕಲ್ ತುಳಿಯುತ್ತ ಕೆಲಸಕ್ಕೆ ಧಾವಿಸುತ್ತಿದ್ದ ತಾಯಿಯ ಸಾವು ಪೌಲ್‌ನ ಮೇಲೆ ಗಾಢ ಪರಿಣಾಮ ಬೀರಿತು. ಸಂಗೀತದಲ್ಲಿ ಆಸಕ್ತಿಯಿದ್ದ ಆತ ಹೇಗೋ ಗಿಟಾರೊಂದನ್ನು ಸಂಪಾದಿಸಿಕೊಂಡು ಕಲಿಯಲು ಶುರುಮಾಡಿದ. ಬಲಗೈಯಲ್ಲಿ ನುಡಿಸುವುದು ಕಷ್ಟವಾದಾಗ ಅದರ ತಂತಿಗಳನ್ನು ಬದಲಿಸಿ ಎಡಗೈಯಲ್ಲಿ ನುಡಿಸಲು ಕಲಿಯತೊಡಗಿದ.

ಇದೇ ಊರಿನಲ್ಲಿ ಪೌಲ್‌ಗಿಂತ ಒಂದು ವರ್ಷ ತಡವಾಗಿ ಹುಟ್ಟಿದವನು ಜಾರ್ಜ್ ಹ್ಯಾರಿಸನ್. ಅವನ ತಂದೆ ಬಸ್ ಕಂಡಕ್ಟರ್. ತಾಯಿ ಅಂಗಡಿಯೊಂದರಲ್ಲಿ ಸಹಾಯಕಿ. ತನ್ನ ಮಕ್ಕಳಿಗೆ ಸದಾ ಬೆಂಬಲವಾಗಿದ್ದ ಆಕೆ ತನ್ನ ಮಕ್ಕಳು ಸಂತೋಷವಾಗಿರುವುದೇ ಮುಖ್ಯ ಎಂದು ನಂಬಿದ್ದವಳು. ಮುಂದೆ ಜಾರ್ಜ್‌ಗೆ ಸಂಗೀತವಲ್ಲದೆ ಬೇರೇನೂ ಸಂತಸ ನೀಡದು ಎಂದರಿತು ಆತನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದವಳು. ಭಾರತೀಯ ಸಂಗೀತದಲ್ಲಿ ಅಪಾರ ಆಸಕ್ತಿಯಿದ್ದ ಆಕೆ, ಜಾರ್ಜ್ ಹೊಟ್ಟೆಯಲ್ಲಿದ್ದಾಗ 'ರೇಡಿಯೊ ಇಂಡಿಯಾ'ವನ್ನು ಆಲಿಸುತ್ತಿದ್ದಳು. ಸಿತಾರ್, ತಬಲಾಗಳ ಅಪೂರ್ವ ಸದ್ದು, ಸಂಗೀತಗಳು ಗರ್ಭದಲ್ಲಿರುವ ಮಗುವಿಗೆ ಶಾಂತಿ, ನೆಮ್ಮದಿಗಳು ತರಲಿ ಎಂಬುದವಳ ಆಸೆ. ಗಿಟಾರ್ ಮೇಲೆ ಆಸಕ್ತಿಯಿದ್ದ ಜಾರ್ಜ್ ಚಿಕ್ಕ ವಯಸ್ಸಿನಿಂದಲೇ ಅದನ್ನು ನುಡಿಸುತ್ತಿದ್ದ. ಒಮ್ಮೆ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ದಾರಿಯ ಮೇಲೆ ಕೇಳಿದ ಎಲ್ವಿಸ್ ಪ್ರೈಸ್ಲೆಯ ಹಾಡು ಆತನಲ್ಲಿ ಸಾಕ್ಷಾತ್ಕಾರದ ರೀತಿಯ ಪರಿಣಾಮ ಬೀರಿತು.